**OS NO-36/2016**
**DW. - 1**

**ದಿನಾಂಕಃ 17/03/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ – ಶ್ರೀ ವಿ ಎಂ ಎನ್ ವಕೀಲರಿಂದ ವಾದಿ ಪರವಾಗಿ**

1. ನನ್ನ ಮದುವೆಯಾಗಿ ಸುಮಾರು 40 ವರ್ಷಗಳಾಗಿರುತ್ತವೆ. ಇವತ್ತಿನವರೆಗೂ ನಾನು ನಮ್ಮ ಅತ್ತೆಯ ಮನೆಯಲ್ಲಿಯೇ ವಾಸಮಾಡುತ್ತಿದ್ದೇನೆ. ಗಂಡ ಮತ್ತು ಮಗ ನನ್ನ ಜೊತೆಯಲ್ಲಿ ವಾಸಮಾಡುತ್ತಿದ್ದು, ಮೂರು ಜನ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದು, ಅವರು ತಮ್ಮ ಗಂಡನ ಮನೆಯಲ್ಲಿಯೇ ವಾಸಮಾಡುತ್ತಿದ್ದಾರೆ. ನನ್ನ ಮತ್ತು ನನ್ನ ಮಗನ ಚುನಾವಣೆ ಗುರುತಿನ ಚೀಟಿಗಳು ಇರುತ್ತವೆ. ಇವತ್ತಿನವರೆಗೂ ನಾನು ನಮ್ಮ ಅತ್ತೆಯ ಮನೆಯಲ್ಲಿಯೇ ವಾಸಮಾಡುತ್ತಿದ್ದೇನೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾನು ನನ್ನ ಅತ್ತೆಯ ಜೊತೆಗೆ ಮತ್ತು ನನ್ನ ಗಂಡನ ಜೊತೆಗೆ ಸರಿಯಾಗಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಗಂಡ ಮತ್ತು ಅತ್ತೆಯನ್ನುಬಿಟ್ಟು ಹೋಗಿ ನನ್ನ ತವರುಮನೆಯಲ್ಲಿ ವಾಸಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ಮೂರು ವರ್ಷಗಳ ನಂತರ ನಾನು ಮತ್ತು ನನ್ನ ಗಂಡ ನಮ್ಮ ಅತ್ತೆ ಮನೆಯಿಂದ ಬೇರೆಯಾಗಿ ಬೇರೆ ಮನೆ ಮಾಡಿ ವಾಸಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆವಾಗಿನಿಂದ ನಾನು ನಮ್ಮ ಅತ್ತೆಯ ಮನೆಗೆ ವಾಪಸ ಹೋಗಿರುವುದಿಲ್ಲ ಎಂದರೆ

ಸರಿಯಲ್ಲ. ನಮ್ಮ ಅತ್ತೆ ಮೃತಪಟ್ಟು ಈಗ 10 ವರ್ಷಗಳಾಗಿರುತ್ತವೆ. ನಮ್ಮ ಅತ್ತೆ ಮೃತಪಟ್ಟ ನಂತರ ನಾವು ಬೇರೆಯಾಗಿರುತ್ತೇವೆ. ನಮ್ಮ ಭಾವ, ನಮ್ಮ ನೆಗಣ್ಣಿಯ ಜೊತೆಗೆ ನನಗೆ ನಡೆಯದೇ ಇದ್ದ ಕಾರಣ ನಮ್ಮ ಅತ್ತೆ ಮೃತಪಟ್ಟ ನಂತರ ನಾನು ಬೇರೆಯಾಗಿರುತ್ತೇನೆ. ನಾನು ಬೇರೆಯಾದ ನಂತರ ಆಸ್ತಿಯನ್ನು ಪಾಲು ಮಾಡಿಕೊಂಡಿರುವುದಿಲ್ಲ. ಅತ್ತೆಗೆ ಸಂಬಂಧಪಟ್ಟ ಬೇರೆ ಮನೆಯಲ್ಲಿ ನಾನು ಬೇರೆಯಾಗಿ ವಾಸಮಾಡುತ್ತಿದ್ದೇನೆ. ನಾನು ಇರುವ ಮನೆಗೂ ನನ್ನ ಅತ್ತೆ ಮನೆಗೂ 4 ಮನೆ ಅಂತರ ದೂರ ಇರುತ್ತದೆ.

2. ನನ್ನ ಗಂಡ ಮೃತಪಟ್ಟು ಈಗ ಸುಮಾರು 30 ವರ್ಷಗಳಾಗಿರುತ್ತವೆ. ನನ್ನ ಗಂಡ ಮೃತಪಟ್ಟ ನಂತರ ನನ್ನ ಭಾವನ ಹತ್ತಿರ ಆಸ್ತಿಯನ್ನು ಪಾಲು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿ ಪಾಲು ಕೇಳಿ ನಾನು ಮುದ್ದೇಬಿಹಾಳ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದೆನು ಎಂದರೆ ಸರಿಯಲ್ಲ. ದಸ್ತಗೀರಸಾಬನ ಹೆಂಡತಿ ವಾದಿ ನಂ:1(ಗ) ಹುಟ್ಟಿದ ಒಂದು ವರ್ಷದ ಒಳಗಾಗಿ ಮೃತಪಟ್ಟಿರುತ್ತಾಳೆ ಎಂದರೆ ಸರಿಯಲ್ಲ. ದಸ್ತಗೀರಸಾಬನ ಹೆಂಡತಿ ಮೃತಪಟ್ಟಾಗಿ ವಾದಿ ನಂ:1(ಗ) 8 ವರ್ಷದವನಾಗಿದ್ದನು. ದಸ್ತಗೀರಸಾಬನ ಹೆಂಡತಿ ಮೃತಪಟ್ಟಾಗ ಆಕೆಯ ಮಕ್ಕಳು ಎಲ್ಲರೂ ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಸ್ತಗೀರಸಾಬನ

ಹೆಂಡತಿ ಮೃತಪಟ್ಟಾಗ ಅವರ ಒಬ್ಬ ಮಗ ಮತ್ತು ಮಗಳ ಮದುವೆಯಾಗಿತ್ತು ಮತ್ತು ಉಳಿದವರು ಚಿಕ್ಕವರಾಗಿದ್ದರು ಎಂದು ನುಡಿಯುತ್ತಾರೆ.

3. ದಸ್ತಗೀರಸಾಬನ ಹೆಂಡತಿ ಮೃತಪಟ್ಟಾಗ ಮಗನ ಮದುವೆಯಾಗಿ 4 ವರ್ಷಗಳಾಗಿದ್ದವು. ವಾದಿ ನಂಃ1(ಅ) ಈತನ ಮದುವೆಯಾಗುವ ಸಮಯದಲ್ಲಿ ವಯಸ್ಸು 20–25 ವರ್ಷ ಇರಬಹುದು. ವಾದಿ ನಂಃ1(ಬ) ಮದುವೆಯಾದಾಗ ಇವಳ ವಯಸ್ಸು 12–13 ವಯಸ್ಸು ಇರಬಹುದು. ಫಾತಿಮಾಳ ಮದುವೆಯಾದ ಎಷ್ಟು ವರ್ಷಗಳಿಗೆ ದಸ್ತಗೀರಸಾಬನ ಹೆಂಡತಿ ಮೃತಪಟ್ಟಿರುತ್ತಾಳೆ ಅಂತಾ ನನಗೆ ನೆನಪಿರುವುದಿಲ್ಲ. ದಸ್ತಗೀರಸಾಬನ ಹೆಂಡತಿ ಮೃತಪಟ್ಟ ನಂತರ ದಸ್ತಗೀರಸಾಬನ ಮಕ್ಕಳನ್ನು ದಸ್ತಗೀರನ ತಾಯಿಯೇ ಜೋಪಾನ ಮಾಡಿರುತ್ತಾಳೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗ ನಾವೆಲ್ಲರೂ ಒಟ್ಟಿಗೆ ಇದ್ದೆವು ಎಂದು ನುಡಿದಿರುತ್ತಾರೆ. ನಾನು ಯಾವತ್ತೂ ದಸ್ತಗೀರಸಾಬನ ಮನೆಯಲ್ಲಿ ವಾಸ ಇರಲಿಲ್ಲ ಮತ್ತು ದಸ್ತಗೀರಸಾಬನ ಮಕ್ಕಳನ್ನು ಜೋಪಾನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ನನ್ನ ಪ್ರತಿವಾದ ಪತ್ರದಲ್ಲಿ ನಾನು ನನ್ನ ಅತ್ತೆ ಮತ್ತು ಭಾವ ಮತ್ತು ಭಾವನ ಮಕ್ಕಳ ಜೊತೆಗೆ ವಾಸಮಾಡುತ್ತಿದ್ದೆ ಅಂತಾ ಹೇಳಿ ಬರೆಸಿರುತ್ತೇನೆ. ನನ್ನ ಪ್ರತಿವಾದ ಪತ್ರದಲ್ಲಿ ನಾನು ನನ್ನ ಅತ್ತೆ ಮತ್ತು ಭಾವ ಮತ್ತು ಭಾವನ ಮಕ್ಕಳ ಜೊತೆಗೆ ವಾಸಮಾಡುತ್ತಿದ್ದೆ

ಅಂತಾ ಹೇಳಿ ಬರೆಸಿರುತ್ತೇನೆ ಅಂತಾ ಹೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ